ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ,
ಚನ್ನರಾಯಪಟ್ಟಣ

ಸಿ ಸಿ ನಂಃ 130/2024

ಚಾಸಾಃ 1 ಪ್ರಾಸಾಃ 3

| | | |
|---|---|---|
| ಸಾಕ್ಷಿಯ ಹೆಸರು | : | ಸಂತೋಷ್ |
| ತಂದೆಯ ಹೆಸರು | : | ಕಾಳೇಗೌಡ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಅಜ್ಜೀನಹಳ್ಳಿ |

ದಿನಾಂಕ **24.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ

ಮೃತ ಲೋಕೇಶ್ ನನ್ನ ತಮ್ಮ. 04.02.2024 ರಂದು 9.04 ನಿಮಿಷದಲ್ಲಿ ರವಿ ಎನ್ನುವವರು ನನಗೆ ಕರೆ ಮಾಡಿದ್ದು ಆರೋಪಿಗೂ ಲೋಕೇಶನಿಗೂ ಅಪಘಾತ ಆಗಿರುತ್ತದೆ ಬನ್ನಿ ಎಂದು ತಿಳಿಸಿರುತ್ತಾರೆ, ಸದರಿ ಜಮೀನು ಅಜ್ಜೀನಹಳ್ಳಿ ಯಲ್ಲಿ ಇದ್ದು ಸದರಿ ಅಪಘಾತ ಕಿಕ್ಕೇರಿ ರಸ್ತೆಯಲ್ಲಿ ಆಗಿದ್ದು ನನ್ನ ತಮ್ಮ ಬೈಕ್ ಕೆಎ 13 3889 ಗಾಡಿಯನ್ನು ಓಡಿಸುತ್ತಿದ್ದು ರವಿ ಎನ್ನುವವರು ಅತಿ ವೇಗವಾಗಿ ಬಂದು ನನ್ನ ತಮ್ಮನಿಗೆ ಡಿಕ್ಕಿ ಪಡಿಸಿರುತ್ತಾರೆ. ನಂತರ ನಾವು ಆಟೋದಲ್ಲಿ ಹೋಗಿರುತ್ತೇವೆ. ಬೆಳಗೊಳ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ದೂರು ಕೊಡಿ ಎಂದಿದ್ದಕ್ಕೆ ದೂರು ಕೊಟ್ಟಿರುತ್ತೇವೆ. ರವಿರವರಿಗೆ ಪೆಟ್ಟಾಗಿದ್ದು ನನ್ನ ತಮ್ಮನಿಗೂ ಪೆಟ್ಟಾಗಿ ಅವರು ಮೃತ ಪಟ್ಟಿರುತ್ತಾರೆ. ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 2ಎ ಎಂದು ಗುರುತಿಸಲಾಯಿತು. 5 ನೇ ತಾರೀಕಿನಂದು ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ ನಾನು ಮತ್ತು ರವಿ ಸ್ಥಳವನ್ನು ತೋರಿಸಿರುತ್ತೇವೆ ಅಲ್ಲಿ ಪೋಲಿಸರು 2 ರಿಂದ 3 ರವರೆಗೆ ಸ್ಥಳ ಮಹಜರ್ ಮಾಡಿರುತ್ತಾರೆ. ರವಿ ನಾನು ಚಾಸಾ 3 ರವರು ಸಹಿ ಮಾಡಿರುತ್ತೇವೆ. ಈಗ ನನಗೆ ತೋರಿಸುತ್ತಿರುವ ಛಾಯಚಿತ್ರವನ್ನು ನೋಡಿ ಗುರುತಿಸಿದ್ದು ವಾಹನ ನಮಗೆ ಸೇರಿದ್ದು ಎಂದು ಹೇಳುತ್ತಾರೆ. ರವಿರವರ ತಪ್ಪಿನಿಂದ ಅಪಘಾತ ಆಗಿರುತ್ತದೆ. ಅರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ಗೈರು

ಹಾಜರಿದ್ದು, ಆರೋಪಿ ಪರ ವಕೀಲರು ಗೈರು ಹಾಜರಾತಿ ವಿನಾಯಿತಿ ಕೋರಿ ಅರ್ಜಿಯನ್ನು ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಮಹಜರನ್ನು ನಿಪಿ 3 ಎಂದು ಸಹಿಯನ್ನು ನಿಪಿ 3ಎ ಎಂದು ಛಾಯಚಿತ್ರವನ್ನು ನಿಪಿ 4 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಗಣಿಸಿ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಿದೆ)**

ಪಾಟೀಸವಾಲುಃ ಮಾನ್ಯ ಎ ಪಿ ಪಿ ರವರಿಂದಃ

ನನ್ನ ತಮ್ಮ ಹರೀಶ ಎನ್ನುವವರು ರಾಗಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ಕೆಎ **13** ಎ ಜಡ್ **3898** ವಾಹನದಲ್ಲಿ ರವಿ ಮತ್ತು ಲೋಕೇಶ್ ಬರುತ್ತಿರುವಾಗ ಆರೋಪಿಯು ಅತಿವೇಗ ಅಜಾಗರೂಕತೆಯಿಂದ ಓಡಿಸಿ ಪ್ರೇಮಮ್ಮ ರವರ ತೋಟದ ಹಳ್ಳಕ್ಕೆ ಬಿಳಿಸಿದ ಪರಿಣಾಮ ಲೋಕೇಶ ರವರು ತೀವ್ರ ಸ್ವರೂಪದ ಪೆಟ್ಟಾಗಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಅಪಘಾತ ಆಗಿದ್ದು ರಾತ್ರಿ **9.10** ಎಂದರೆ ಸರಿ. ಪೋಲಿಸರು ಸ್ಥಳಕ್ಕೆ ಬಂದಾಗ ಬೈಕ್ ಅಲ್ಲೆ ಬಿದ್ದಿದ್ದು ಅದನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ .

ಪಾಟಿ ಸವಾಲು ಆರೋಪಿತರ ಪರ ಶ್ರೀ ವಕೀಲರಿಂದಃ

ರವಿರವರು **9.04** ಕ್ಕೆ ಕರೆ ಮಾಡಿರುತ್ತಾರೆ. ರವಿ ಅವರು ಅವರ ಫೋನ್ ನಿಂದ ಕರೆ ಮಾಡಿರುತ್ತಾರೆ. ಅವರ ಫೋನ್ ನಂಬರ್ ನನಗೆ ಗೊತ್ತಿಲ್ಲ. ರವಿ ಅವರು ಕರೆ ಮಾಡಿದ ನಂತರ ಕಿಕ್ಕೇರಿ ರಸ್ತೆ ಬಳಿ ಇರುವ ಜಮೀನಿನ ಹತ್ತಿರ ಹೋಗಿರುತ್ತೇನೆ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಬೆಳಿಗ್ಗೆ **10** ಗಂಟೆಗೆ ಠಾಣೆಗೆ ದೂರು ನೀಡಿರುತ್ತೇನೆ. ದೂರನ್ನು ಬರೆದವರು ಪೋಲಿಸರು ಬರೆದಿರುತ್ತಾರೆ. ದೂರಿನಲ್ಲಿ ಏನೇನು ಬರೆದಿರುತ್ತಾರೆ ಎಂದು ನಿರ್ದಿಷ್ಟವಾಗಿ ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತವನ್ನು ಉಂಟು ಮಾಡಿದ ವಾಹನ **2024** ರಲ್ಲಿ ಖರೀದಿ ಮಾಡಿದ್ದಾಗಿರುತ್ತದೆ. ಎಷ್ಟು ಅತಿವೇಗದಲ್ಲಿ ಬಂದಿರುತ್ತಾರೆಂದು ನನಗೆ ಗೊತ್ತಿಲ್ಲ. ಎಷ್ಟು ದಿನದ ಹಿಂದೆ ಇಂದ ರಾಗಿ ವ್ಯಾಪಾರ ಮಾಡುತ್ತಿದ್ದರು ಎಂದರೆ **2024** ರಿಂದ ಎಂದು ನುಡಿಯುತ್ತಾರೆ. ರವಿ ಅವರು ಎಷ್ಟು ವರ್ಷದಿಂದ ಪರಿಚಯ ಎಂದರೆ ನನಗೆ **11 -12** ವರ್ಷ ದಿಂದಲೇ ಪರಿಚಯ. ಆರೋಪಿ ಯಾವ ಊರಿನವರು ಎಂದರೆ ಐಕರ ಹಳ್ಳಿ ಕಿಕ್ಕೇರಿ ಹೋಬಳಿ. ಯಾರು ಸ್ಥಳ ಮಹಜರ್ ಗೆ ಬಂದಿರುತ್ತಾರೆ ಅವರ ಹೆಸರು ಹೇಳಲು ನನಗೆ ಸಾಧ್ಯವಿಲ್ಲ, ನನಗೆ ಪೋಲಿಸರು ನೋಟಿಸನ್ನು ನೀಡಿರುವುದಿಲ್ಲ. ನನ್ನ ಜೊತೆ ಮತ್ತೆ ಯಾರು ಸಹಿ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿನ ಸ್ಥಳದ

ಚಕ್ಕುಬಂದಿ ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಛಾಯಚಿತ್ರವನ್ನು ಠಾಣೆಯಲ್ಲಿ ತೆಗೆಯಲಾಗಿರುತ್ತದೆ. ವಾಹನವನ್ನು ಸ್ಥಳದಲ್ಲಿ ವಶ ಪಡಿಸಿಕೊಂಡಿರುವುದಿಲ್ಲ. ನನಗೆ ರವಿ ಅವರು ಗೊತ್ತಿಲ್ಲದಿದ್ದರೂ ಸಹ ಗೊತ್ತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮನವರೇ ಗಾಡಿ ಚಲಾಯಿಸುತ್ತಿದ್ದು ರವಿ ಅವರೇ ಎಂದು ಸುಳ್ಳು ನಮೂದು ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನನಗೆ ಏನು ಗೊತ್ತಿಲ್ಲ ಸ್ಥಳಕ್ಕೆ ಹೊಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.